ಗೊ.ರು. ಚನ್ನಬಸಪ್ಪ 1930ರ ಮೇ 18ರಂದು ಚಿಕ್ಕಮಗಳೂರು ಜಿಲ್ಲೆಯ ಈಗಿನ ಅಜ್ಜಂಪುರ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ ಜನಿಸಿದರು. ತಂದೆ ರುದ್ರಪ್ಪಗೌಡರು, ತಾಯಿ ಅಕ್ಕಮ್ಮ. ಗಾಂಧಿ ಗ್ರಾಮದಲ್ಲಿ ಶಿಕ್ಷಣ ತರಬೇತಿ ಪಡೆದು ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್' ಪ್ರಧಾನ ಕಮಿಷನರ್ ಆಗಿದ್ದರು. ಕರ್ನಾಟಕ ಸರ್ಕಾರದ 'ಪಂಚಾಯತ್ ರಾಜ್ಯ', 'ಜನಪದ' ಮಾಸಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿಯೂ ಕೆಲಸ ಮಾಡಿದ್ದಾರೆ.

ಬಿರೂರಿನಲ್ಲಿ ಪ್ರೌಢ ಶಾಲೆಯಲ್ಲಿ ಓದುವಾಗ ಸ್ವಾತಂತ್ರ್ಯ ಚಳವಳಿಯಿಂದ ಪ್ರಭಾವಿತರಾಗಿದ್ದರು. ಭೂದಾನ ಚಳವಳಿ, ಕನ್ನಡ ಚಳವಳಿ, ಶರಣ ಸಾಹಿತ್ಯ ಚಟುವಟಿಕೆ, ಜಾನಪದ ಅಧ್ಯಯನದಲ್ಲಿ ತೊಡಗಿದ್ದರು. 'ಮಹಾದೇವಿ', 'ಸದಾಶಿವ ಶಿವಾಚಾರ್ಯ', 'ಕರ್ನಾಟಕ ಪ್ರಗತಿಪಥ', 'ಚೆಲುವಾಂಬಿಕೆ', 'ಬೆಳ್ಳಕ್ಕಿ ಹಿಂಡು ಬೆದರ್ಯಾವೊ', 'ಗ್ರಾಮ ಗೀತೆಗಳು', 'ವಿಭೂತಿ' ಅವರ ಪ್ರಮುಖ ಕೃತಿಗಳು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ–ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.



ಅಂತರ್ಜಾಲ ದುರುಪಯೋಗವೂ ನಡೆಯುತ್ತಿದೆ. ಪರಿಷತ್ತು ಹೊಣೆಗಾರ ಸಂಸ್ಥೆಯಾಗಿ ತಜ್ಞರ ಸಮಿತಿಯನ್ನು ರೂಪಿಸಬೇಕು. ಆ ಸಮಿತಿ ಕಾಲ ಕಾಲಕ್ಕೆ ಸುಧಾರಣೆ, ಪರಿಹಾರವನ್ನು ಸೂಚಿಸುವಂತೆ ಆಗಬೇಕು. ತಪ್ಪುಗಳನ್ನು ಸರಿಪಡಿಸುವ ಕೆಲಸವನ್ನು ಕಾಲಕಾಲಕ್ಕೆ ಅದು ಮಾಡಬೇಕು.

**◆ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಭಾಷಣಗಳು ಹಾಗೂ ಸಮ್ಮೇಳನದ ನಿರ್ಣಯಗಳು ಅನುಷ್ಠಾನ ಆಗುವುದೇ ಇಲ್ಲ.**

ಸಮ್ಮೇಳನ ಅಂದರೆ, ನಿರ್ಣಯ ಮಾಡಬೇಕು ಎನ್ನುವುದು ರೂಢಿ. ಆ ನಿರ್ಣಯಗಳಲ್ಲಿ ಕೆಲವೊಂದು ನಿರ್ಣಯಗಳನ್ನು ಸಂಸ್ಥೆ ಅನುಷ್ಠಾನ ಮಾಡಬೇಕಾಗುತ್ತದೆ. ಅವುಗಳಲ್ಲಿ ಕೆಲವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ, ಇನ್ನೂ ಸಾರ್ವಜನಿಕ ಸಂಘ ಸಂಸ್ಥೆಗಳು ಅನುಷ್ಠಾನ ಮಾಡಬೇಕಾಗುತ್ತದೆ. ಬಹುತೇಕ ನಿರ್ಣಯಗಳು ಅನುಷ್ಠಾನ ಆಗಿಲ್ಲ ಎನ್ನುವುದು ವಿಷಾದದ ವಿಷಯ. ವೇದಿಕೆಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳ ಬಗ್ಗೆ ಸರ್ಕಾರ ಗಂಭೀರವಾಗಿ ಗಮನಹರಿಸಬೇಕು. ನಿರ್ಣಯಗಳನ್ನು ಉಪೇಕ್ಷಿಸದೆ ಅನುಷ್ಠಾನಗೊಳಿಸಿ ಎಂದು ನಾನು ಒತ್ತಾಯಿಸುತ್ತೇನೆ.

**◆ ಧರ್ಮ ಮತ್ತು ಮತಾಚರಣೆ ಕುರಿತು ವಚನ ಸಾಹಿತ್ಯ ಏನು ಹೇಳುತ್ತದೆ?**

ವಚನ ಸಾಹಿತ್ಯ 12ನೇ ಶತಮಾನದ ವ್ಯವಸ್ಥೆಯ ವಿರುದ್ಧದ ಚಳವಳಿ. ರಾಜಕೀಯ, ಸಾಮಾಜಿಕ ವ್ಯವಸ್ಥೆ ಸೇರಿ ಜನರ ಅಂಧಶ್ರದ್ಧೆಯನ್ನು ನಿವಾರಿಸಿ ಅವರನ್ನು ಪ್ರಜ್ಞಾವಂತರನ್ನಾಗಿ ಮಾಡಬೇಕು ಎನ್ನುವುದು ಶರಣ ಸಿದ್ಧಾಂತದ ಮುಖ್ಯ ಆಶಯ. ಪಟ್ಟಭದ್ರ ಹಿತಾಸಕ್ತಿಗಳಿಂದ ಆ ಆಶಯಗಳು ಮೊಟಕಾದವು ಅನ್ನಿಸುತ್ತದೆ. ಶರಣರ ಕಾಲದಲ್ಲಿ ಸೋಜಿಗ ಪಡುವಂತಹ ಕೆಲಸಗಳು ಆದವು. ಶರಣ ಸಮುದಾಯದ ನಂತರ ಹಳೆಯ ಪದ್ಧತಿಗಳೇ ರೂಢಿಗೆ ಬಂದಿವೆ. ಈಗ ಅದರ ಪುನರ್ ಜಾಗೃತಿ ಮಾಡಬೇಕಾದ ಅಗತ್ಯ ಇದೆ. ಇದೇ ದೃಷ್ಟಿಯಲ್ಲಿ ಸರ್ಕಾರ 'ನೂತನ ಅನುಭವ ಮಂಟಪ' ಮಾಡುತ್ತಿರುವುದು ಸಂತೋಷ ಉಂಟುಮಾಡಿದೆ. ನೂತನ ಅನುಭವ ಮಂಟಪದ ಸಮಿತಿಯ ಅಧ್ಯಕ್ಷನಾಗಿ ಒಂದಿಷ್ಟು ಕೆಲಸ ಮಾಡುತ್ತಿದ್ದೇನೆ. ನಾವು ಕೊಟ್ಟ ವರದಿಯನ್ನು ಅನುಸರಿಸಿ ಈ ಯೋಜನೆ ಜಾರಿಯಾಗುತ್ತಿದೆ. ಅವತ್ತು ಹೇಗೆ ತಾತ್ವಿಕ ಚಿಂತನೆ ಚರ್ಚೆ ಮಾಡುತ್ತಿದ್ದರೋ ಅಂತೆಯೇ ಇವತ್ತಿನ ಸಮಸ್ಯೆ, ಜಾಗತಿಕ ವಿಚಾರಗಳ ಬಗ್ಗೆ ಚರ್ಚೆ ಮಾಡುವ ಸರ್ಕಾರಕ್ಕೆ ಸಲಹೆ ನೀಡುವಂತೆ ಇದು ಕೆಲಸ ಮಾಡಬೇಕು. ವಚನ ಚಳವಳಿ ಯಾವುದೋ ಮತಪ್ರಚಾರಕ್ಕೆ ಆಗಿದ್ದು ಎಂದು ನಾನು ಭಾವಿಸಿಲ್ಲ. ವೈಚಾರಿಕ ಪ್ರಜ್ಞೆ ಮೂಡಿಸಲು ಹುಟ್ಟಿತ್ತು.

**◆ ದೇಶದಾದ್ಯಂತ ಬಹುತ್ವದ ವಿರುದ್ಧ ಏಕತ್ವ ಸಾಧಿಸಲು ಪ್ರಭುತ್ವ ತಹತಹಿಸುತ್ತಿದೆ. ಮುಂದಿನ ದಿನಗಳಲ್ಲಿ ಅದರ ಸಾಧಕ ಬಾಧಕಗಳು ಏನಾಗಬಹುದು? ಮಾಂಸಾಹಾರ ನಿಷೇಧ ಅದರ ಸಣ್ಣ ಸೂಚನೆಯಲ್ಲವೆ?**

ಬಹುತ್ವ ಅನ್ನುವುದು ಭಾರತದ ನಾಡಿ. ಅದನ್ನು ಕೆಡಿಸಬಾರದು. ವೈವಿಧ್ಯದಲ್ಲೇ ವಿಶೇಷವನ್ನು ಕಂಡ ಪರಂಪರೆ ನಮ್ಮದು. ಎಲ್ಲ ಕಾಲದಲ್ಲೂ ಅದು ಇದೆ. ಪ್ರಭುತ್ವಕ್ಕೆ ಯಾವತ್ತೂ ಅಧಿಕಾರದ ಬಗ್ಗೆ ಆಸಕ್ತಿ ಇರುತ್ತದೆ. ಅಧಿಕಾರ ಭದ್ರಪಡಿಸಿಕೊಳ್ಳಲು ಏಕರೂಪತೆ ಇದ್ದರೆ ಅನುಕೂಲ. ಬಹುತ್ವ ಇದ್ದರೆ ಭಿನ್ನ ಅಭಿಪ್ರಾಯ ಮತ್ತು ವಿರೋಧಗಳು ಹೆಚ್ಚಾಗಬಹುದು ಎನ್ನುವ ಭಯ ಅದಕ್ಕಿದೆ. ಹಾಗಾಗಿ ಏಕತ್ವಕ್ಕೆ ಮಹತ್ವ ಕೊಡುತ್ತದೆ. ಹಾಗೆ ಮಾಡಬಾರದು. ಸ್ವಾತಂತ್ರ್ಯ ಪೂರ್ವದಲ್ಲೂ ಈ ದೇಶದಲ್ಲಿ ಬಹುತ್ವ ಇತ್ತು. ಅದು ರಾಷ್ಟ್ರೀಯ ಚಳವಳಿಗೆ ಎಲ್ಲೂ ಅಡ್ಡಿ ಮಾಡಲಿಲ್ಲ. ಆ ಬಹುತ್ವ ಎಲ್ಲ ಕೂಡಿ ಹೋರಾಟ ಮಾಡಿತು. ಭಾರತದಲ್ಲಿ ಎಷ್ಟೇ ಭಾಷೆ–ಸಂಸ್ಕೃತಿ ಇದ್ದರೂ ಅವು ರಾಷ್ಟ್ರೀಯತೆ, ಸಮಗ್ರತೆಯ ವಿಷಯ ಬಂದಾಗ ಒಂದಾಗಿ ಕೆಲಸ ಮಾಡುತ್ತವೆ. ಹಾಗಿರುವಾಗ ಆ ಬಹುತ್ವವನ್ನು ಕೆಡಿಸಿ ಏಕರೂಪತೆಯನ್ನು ತರುವ ಅವಸರ ಮಾಡಬಾರದು. ಅದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಲಕ್ಷಣ ಅಲ್ಲ. ಯಾವುದನ್ನೂ ಆ ದೃಷ್ಟಿಯಿಂದ ಮಾಡಬಾರದು. ವೈಯಕ್ತಿಕವಾದ ಅಭಿರುಚಿ ಆಸಕ್ತಿಗಳು ಸಮುದಾಯದ ಹಿತಕ್ಕೂ ಧಕ್ಕೆ ತರಬಾರದು. ಅದು ನಮ್ಮ ವೈಯಕ್ತಿಕ ನೆಲೆಯಲ್ಲೇ ಸ್ಥಿರವಾಗಿ ಇರಬೇಕು. ನಮ್ಮ ಸಾಹಿತ್ಯದ ಮುಖ್ಯ ಉದ್ದೇಶವೇ ಜನರ ಮನ ಪರಿವರ್ತನೆ. ಮುಖ್ಯ ಆಶಯ ಅದಾಗಬೇಕು. ಆ ದೃಷ್ಟಿಯಿಂದ ಅನಗತ್ಯ ವಿವಾದ ಬರಬಾರದು. ಆಹಾರ ವಿಹಾರಗಳು ವೈಯಕ್ತಿಕ ವಿಚಾರಗಳು.

ಪ್ರತಿಕ್ರಿಯಿಸಿ: **feedback@sudha.co.in**